| | | |
|---|---|---|
| 3 | ನೈಸರ್ಗಿಕ ಅನಿಲ ರಿ–ಗ್ಯಾಸಿಫಿಕೇಷನ್ ಘಟಕ | 3950.50 |
| 4 | ಮಂಗಳೂರು – ಹಾಸನ – ಬೆಂಗಳೂರು ನೈಸರ್ಗಿಕ ಅನಿಲ ಸಾಗಾಣಿಕೆ ಪೈಪೈಲೈನ್ ಘಟಕ | 945.00 |
| | ಒಟ್ಟು | **20964.50** |

ಆ) ಮಂಗಳೂರು ವಿಮಾನ ನಿಲ್ದಾಣವನ್ನು ಅಂತರಾಷ್ಟ್ರೀಯ ಮಟ್ಟಕ್ಕೆ ಅಭಿವೃದ್ಧಿಗೊಳಿಸಲು ರಾಜ್ಯ ಸರ್ಕಾರವು ಕೇಂದ್ರ ಸರ್ಕಾರದ ಜೊತೆಗೂಡಿ ಅಗತ್ಯ ಕ್ರಮಗಳನ್ನು ಜರುಗಿಸಿದೆ. ಎರಡನೇ ರನ್ ವೇ ನಿರ್ಮಾಣ ಕಾರ್ಯಕ್ಕೆ ಒಟ್ಟಾರೆ ಅಗತ್ಯವಿರುವ 186.33 1/2 ಎಕರೆ ಜಮೀನ್ನು AAI ಗೆ ಹಸ್ತಾಂತರಿಸಲಾಗಿದೆ. ವಿಸ್ತಾರಣಾ ಕಾರ್ಯಕ್ಕೆ ಅಗತ್ಯವಿರುವ ಭೂಸ್ವಾಧೀನ ಸಂಬಂಧ ಈಗಾಗಲೇ ರೂ. 11.00 ಕೋಟಿಗಳನ್ನು ರಾಜ್ಯ ಸರ್ಕಾರವು ಬಿಡುಗಡೆ ಮಾಡಿದೆ.

ಹಾಸನ – ಮಂಗಳೂರು ಗೇಜ್ ಪರಿವರ್ತನೆ ಯೋಜನೆಯ ಕಾಮಗಾರಿಯ ಒಟ್ಟು ವೆಚ್ಚ ರೂ. 291ಕೋಟಿ ಆಗಿರುತ್ತದೆ. ಹೆಚ್‌ಎಂಆರ್‌ಡಿಸಿ ಷೇರುದಾರರ ಒಪ್ಪಂದದನ್ವಯ ರಾಜ್ಯ ಸರ್ಕಾರವು ರೂ. 45 ಕೋಟಿ ಈಕ್ವಿಟಿ ನೀಡಬೇಕಾಗಿದೆ. ಈಗಾಗಲೇ ರೂ. 28 ಕೋಟಿ ಮೊತ್ತವನ್ನು ಬಿಡುಗಡೆ ಮಾಡಲಾಗಿದೆ.

ಕಾಮಗಾರಿಯ ಚಟುವಟಿಕೆಗಳು ಬಿರುಸಿನಿಂದ ಸಾಗಿರುತ್ತದೆ. 2005ನೇ ಸಾಲಿನ ಮಧ್ಯದಲ್ಲಿ ಈ ಮಾರ್ಗವು ಪೂರ್ಣಗೊಳ್ಳುವ ನಿರೀಕ್ಷೆ ಇದೆ. 2004–05 ನೇ ಸಾಲಿನ ಪೂರಕ ಅನುದಾನದಲ್ಲಿ ರೂ. 17ಕೋಟಿಗಳ ಮೊತ್ತವನ್ನು ಒದಗಿಸಲು ಆರ್ಥಿಕ ಇಲಾಖೆಯನ್ನು ಕೋರಲಾಗಿದೆ.

## ವಿದ್ಯುಚ್ಛಕ್ತಿ (ಕರ್ನಾಟಕ ತಿದ್ದುಪಡಿ) ವಿಧೇಯಕ, 2005
## (2005ರ ವಿಧಾನಸಭೆಯ ವಿಧೇಯಕ ಸಂಖ್ಯೆ 2)

ಕರ್ನಾಟಕ ರಾಜ್ಯಕ್ಕೆ ವಿದ್ಯುಚ್ಛಕ್ತಿ ಅಧಿನಿಯಮ, 2003ರ ಅನ್ವಯದ ಸಂಬಂಧದಲ್ಲಿ ತಿದ್ದುಪಡಿ ಮಾಡಲು ಒಂದು ವಿಧೇಯಕ.

ಇಲ್ಲಿ ಇನ್ನು ಮುಂದೆ ಕುಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ರಾಜ್ಯಕ್ಕೆ ವಿದ್ಯುಚ್ಛಕ್ತಿ ಅಧಿನಿಯಮ, 2003 (2003ರ ಕೇಂದ್ರ ಅಧಿನಿಯಮ 36) ಅನ್ವಯಿಸುವ ಸಂಬಂಧದಲ್ಲಿ ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಐವತ್ತೈದನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ, ಎಂದರೆ:–

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ:–**

(1) ಈ ಅಧಿನಿಯಮವನ್ನು ವಿದ್ಯುಚ್ಛಕ್ತಿ (ಕರ್ನಾಟಕ ತಿದ್ದುಪಡಿ) ಅಧಿನಿಯಮ, 2005 ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು.

**2. 151ನೇ ಪ್ರಕರಣದ ಪ್ರತಿಯೋಜನೆ:–**

ವಿದ್ಯುಚ್ಛಕ್ತಿ ಅಧಿನಿಯಮ, 2003 (2003ರ ಕೇಂದ್ರ ಅಧಿನಿಯಮ 36 151ನೇ ಪ್ರಕರಣಕ್ಕೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:–

"151. ಅಭಿಯೋಜನೆಯನ್ನು ಪ್ರಾರಂಭಿಸುವುದು:– ರಾಜ್ಯ ಸರ್ಕಾರ ಅಥವಾ ಬಬ್ಬ ಲೈಸನ್ಸುದಾರ ಅಥವಾ ಈ ಅಧಿನಿಯಮದ ಅಡಿಯಲ್ಲಿ ಒಂದು ಉತ್ಪಾದನಾ ಕಂಪನಿ ಅಥವಾ ರಾಜ್ಯ ಸರ್ಕಾರವು ಅಥವಾ ಒಬ್ಬ ಲೈಸನ್ಸುದಾರ ಅಥವಾ ಉತ್ಪಾದನಾ ಕಂಪನಿಯ ಅಧಿಕಾರ ನೀಡಿದಂಥ ಒಬ್ಬ ಅಧಿಕಾರಿ ಅಥವಾ ಅಪರಾಧವೆಂದು ಆರೋಪಿಸಲಾದ ಕೃತದಿಂದ ಬಾಧಿತನಾದ ಯಾವೂಬ್ಬ ವ್ಯಕ್ತಿಯ ಕೋರಿಕೆಯ ಮೇಲಲ್ಲದೆ ಈ ಅಧಿನಿಯಮದ ಅಥವಾ ಅದರಡಿ ಹೊರಡಿಸಿದ ಯಾವುದೇ ನಿಯಮ, ವಿನಿಯಮ, ಲೈಸನ್ಸು ಅಥವಾ ನಾಡಿದ ಆದೇಶದ ಅಡಿಯಲ್ಲಿಯ ಯಾವುದೇ ಅಪರಾಧಕ್ಕಾಗಿ ಯಾವೂಬ್ಬ ವ್ಯಕ್ತಿಯ ಅಭಿಯೋಜನೆಯನ್ನು ಪ್ರಾರಂಭಿಸತಕ್ಕದ್ದಿಲ್ಲ."

**ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ**

ಅಧಿನಿಯಮದ ಅಡಿಯಲ್ಲಿ ಅಪರಾಧಗಳ ಸಂಜ್ಞಾನವನ್ನು ತೆಗೆದುಕೊಳ್ಳಲು ಪ್ರಾಧಿಕೃತ ನ್ಯಾಯಾಲಯಗಳು (ವಿಶೇಷ ನ್ಯಾಯಾಲಯಗಳು) ಮುಂದೆ ಫಿರ್ಯಾದನ್ನು ದಾಖಲು ಮಾಡುವುದಕ್ಕೆ ರಾಜ್ಯದಲ್ಲಿ ವಿವಿಧ ವಿದ್ಯುತ್ ಸರಬರಾಜು ಕಂಪನಿಗಳಲ್ಲಿ ಸ್ಥಾಪಿತವಾದ ಪೊಲೀಸು ವಿವಕ್ಷಣ( ವಿಜಿಲೆನ್ಸ್) ಸ್ಟೇಷನ್‌ಗಳಿಗೆ ಅಧಿಕಾರವನ್ನು ನೀಡಲು ವಿದ್ಯುಚ್ಛಕ್ತಿ ಅಧಿನಿಯಮ, 2003ರ (2003ರ ಕೇಂದ್ರ ಅಧಿನಿಯಮ 36) 151ನೇ ಪ್ರಕರಣಕ್ಕೆ ತಿದ್ದುಪಡಿ ತರುವುದು ಅವಶ್ಯಕವೆಂದು ಪರಿಗಣಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

**ಆರ್ಥಿಕ ಜ್ಞಾಪನ ಪತ್ರ**

ಪ್ರಸ್ತಾವಿತ ವಿಧೇಯಕವನ್ನು ಅನುಷ್ಠಾನಕ್ಕೆ ತರುವುದರಿಂದ ಹೆಚ್ಚಿನ ವೆಚ್ಚ ಉಂಟಾಗುವುದಿಲ್ಲ.

**ಹೆಚ್. ಡಿ. ರೇವಣ್ಣ**
ಲೋಕೋಪಯೋಗಿ ಮತ್ತು ಇಂಧನ ಸಚಿವರು

**ಟಿ.ರಾಜಣ್ಣ**
ಕಾರ್ಯದರ್ಶಿ

**ಅನುಬಂಧ**

**ವಿದ್ಯುಚ್ಛಕ್ತಿ ಅಧಿನಿಯಮ 2003ರ (2003ರ ಕೇಂದ್ರ ಅಧಿನಿಯಮ 36)ಉದ್ಧೃತ ಭಾಗ**

**151ನೇ ಪ್ರಕರಣ:–** ಯಾವುದೇ ನ್ಯಾಯಾಲಯವು ಈ ಅಧಿನಿಯದ ಅಡಿಯಲ್ಲಿ ದಂಡನೀಯವಾದ ಅಪರಾಧದ ಸಂಜ್ಞಾನವನ್ನು ಸಮುಚಿತ ಸರ್ಕಾರ ಅಥವಾ ಸಮುಚಿತ ಆಯೋಗ ಅಥವಾ ಈ ಉದ್ದೇಶಕ್ಕಾಗಿ ಅವುಗಳು ಪ್ರಾಧಿಕಾರ ನೀಡದ ಅವರ ಯಾವೂಬ್ಬ ಅಧಿಕಾರಿ ಅಥವಾ ಮುಖ್ಯ ವಿದ್ಯುತ್ ಪರಿವೀಕ್ಷಕ ಅಥವಾ ಲೈಸನ್ಸುದಾರ ಅಥವಾ ಸಂದರ್ಭಾನುಸಾರ ಕಂಪನಿಯಿಂದ ಪಡೆದ ಲಿಖಿತ ದೂರಿನ ಮೆಲೆ ಹೊರತುಪಡಿಸಿ ತೆಗೆದುಕೊಳ್ಳುವಂತಿಲ್ಲ.